# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 208/2024**

**CW17**

**PW7**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಂಜಪ್ಪ ಡಿ. ಆರ್. |
| ತಂದೆ ಹೆಸರು | ಃ | ದುರ್ಗಪ್ಪ |
| ಪ್ರಾಯ | ಃ | 54 ವರ್ಷ |
| ಉದ್ಯೋಗ | ಃ | ಸಿ.ಪಿ.ಐ. ಕಾರ್ಕಳ ವೃತ್ತ ಪೋಲೀಸ್ ಠಾಣೆ |
| ವಾಸ | ಃ | ಕಾರ್ಕಳ |

ದಿನಾಂಕ : **06.03.2026** ರಂದು ಪಿಡಬ್ಲ್ಯೂ - 7 / ಸಿಡಬ್ಲ್ಯೂ - 17 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು 29.03.2024 ರಿಂದ ಇಲ್ಲಿಯವರೆಗೆ ಕಾರ್ಕಳ ವೃತ್ತ ನಿರೀಕ್ಷರಾಗಿ ಕೆಲಸ ಮಾಡುತ್ತಿದ್ದೇನೆ. ಅದೇ ದಿನ ನಾನು ಪ್ರಕರಣದ ಕಡತವನ್ನು ಹಿಂದಿನ ತನಿಖಾಧಿಕಾರಿಗಳಾದ ನಾಗೇಶ್ ರವರಿಂದ ಪಡೆದು ಪರಿಶೀಲಿಸಿ, ಅಪಘಾತದ ಸ್ಥಳಕ್ಕೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿದ್ದೇನೆ. 12.04.2024 ರಂದು ಈ ಪ್ರಕರಣದ

CC 208/2024
CW17
PW7

1 ನೇ ಆರೋಪಿಯು ಠಾಣೆಗೆ ಹಾಜರಾಗಿದ್ದು, ಆತನು ತಪ್ಪೊಪ್ಪಿ ಕೊಂಡ ಮೇರೆಗೆ ದಸ್ತಗಿರಿ ಕ್ರಮವನ್ನು ಜರುಗಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ. ಈಗ ಸದರಿ 1 ನೇ ಆರೋಪಿಯು ನ್ಯಾಯಾಲಯದಲ್ಲಿ ಹಾಜರಿದ್ದಾರೆ. ಈ ಪ್ರಕರಣದ ವಾಹನದ ಆರ್.ಸಿ. ಮಾಲೀಕರಾದ 2 ನೇ ಆರೋಪಿಯು ಠಾಣೆಗೆ ಹಾಜರಾಗಿದ್ದು, ಅವರಿಗೆ ಐ.ಎಮ್.ವಿ ಕಾಯ್ದೆಯ ಕಲಂ 133 ರಡಿಯಲ್ಲಿ ನೋಟೀಸನ್ನು ನೀಡಿದ್ದು, ಅವರಿಂದ ಪ್ರತ್ಯುತ್ತರ ಪಡೆದಿದ್ದೇನೆ. ಸದರಿ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ - 12 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ - 12(ಎ) ಎಂದು ಗುರುತಿಸಲಾಯಿತು. 2 ನೇ ಆರೋಪಿಯು ನೀಡಿದ ಪ್ರತ್ಯುತ್ತರವನ್ನು ನಾನು ನೋಡುತ್ತಿದ್ದು, ಅದನ್ನು ನಿಪಿ - 13 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ - 13(ಎ) ಎಂದು ಗುರುತಿಸಲಾಯಿತು. ನಂತರ ನ್ಯಾಯಾಲಯದ ಆದೇಶದಂತೆ ಮಹಜರನ್ನು ಜರುಗಿಸಿ, ವಶಪಡಿಸಿಕೊಂಡ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿಪಿ - 6 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ - 6(ಸಿ) ಎಂದು ಗುರುತಿಸಲಾಯಿತು. 17.04.2024 ರಂದು ವಾಹನದ ಯಾಂತ್ರಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ - 7 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ - 7(ಎ) ಎಂದು ಗುರುತಿಸಲಾಯಿತು. ಮಹಜರು ಸಮಯದಲ್ಲಿ ಹಿಂದಿನ ತನಿಹಾಧಿಕಾರಿಗಳು

ವಶಪಡಿಕೊಂಡಂತಹ ಮಾದರಿಗಳನ್ನು ಎಫ್.ಎಸ್.ಎಲ್.ಗೆ ಕಳುಹಿಸಿದ್ದು, ಅದರ ವರದಿಯನ್ನು ನಾನು ಕಂಪ್ಯೂಟರ್ ಮೂಲಕ ಡೌನ್ ಲೋಡ್ ಮಾಡಿ , ಅದಕ್ಕೆ ಸಂಬಂಧಿಸಿದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ರಡಿಯಲ್ಲಿನ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಎಫ್.ಎಸ್.ಎಲ್. ವರದಿಯನ್ನು ನಿಪಿ - 14 ಎಂದು ಗುರುತಿಸಲಾಯಿತು. ನಾನು ನೀಡಿದ ಕಲಂ 65 ರಡಿಯಲ್ಲಿನ ಪ್ರಮಾಣ ಪತ್ರವನ್ನು ನಿಪಿ - 15 ಎಂದು ಗುರುತಿಸಲಾಯಿತು. ನಿಪಿ - 15 ರಲ್ಲಿನ ನನ್ನ ಸಹಿಯನ್ನು ನಿಪಿ - 15(ಎ) ಎಂದು ಗುರುತಿಸಲಾಯಿತು. ದಿಃ22.04.2024 ರಂದು ಅಂತಿಮ ವರದಿಯನ್ನು ನೀಡಿರುತ್ತೇನೆ. 2 ನೇ ಆರೋಪಿಯನ್ನು ನಾನು ಗುರುತಿಸುತ್ತೇನೆ. ಗುರುತಿಸಲು ತಕರಾರು ಇರುವುದಿಲ್ಲ ಎಂದು ವಕೀಲರು ತಿಳಿಸಿರುತ್ತಾರೆ. ಈ ದಿನ 2 ನೇ ಆರೋಪಿಯು ನ್ಯಾಯಾಲಯದಲ್ಲಿರುವುದಿಲ್ಲ.

<u>ಪಾಟೀ ಸವಾಲುಃ</u> ಶ್ರೀ ಪಿ.ಎ.ಎಸ್. ಆರೋಪಿ ಪರ ವಕೀಲರಿಂದಃ

ಅಪಘಾತಕ್ಕೊಳಗಾದ ಕಾಂಕ್ರಿಟ್ ಮಿಕ್ಸರ್ ದುರ್ಗಾ ಕನ್ಸ್ಟ್ರಕ್ಷನ್ ಕಂಪನಿಗೆ ಸೇರಿರುತ್ತದೆ ಎಂದರೆ ಸರಿ. ಮುಂದುವರಿದು ಸದರಿ ಕಂಪನಿಯ ಮಾಲೀಕರು 2 ನೇ ಆರೋಪಿ ಎಂದು ನುಡಿಯುತ್ತೇನೆ. ಅಂದರೆ ವಾಹನವನ್ನು 2 ನೇ ಆರೋಪಿಯು ತಾವೇ ಮಾಲೀಕರು ಎಂದು ಬಿಡುಗಡೆ ಮಾಡಿಕೊಂಡು ಹೋಗಿರುತ್ತಾರೆ. ಸದರಿ ಕಂಪನಿಯ ಮಸ್ಟರ್ ರೋಲ್ ನಲ್ಲಿ 1 ನೇ

ಆರೋಪಿಯ ಹೆಸರು ಇದೆಯೋ ಇಲ್ಲವೋ ಎಂದು ಮತ್ತು ಅವರು ಏನು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ನಾನು ಪರಿಶೀಲಿಸಿರುವುದಿಲ್ಲ. ಆದರೆ ನಾವು ನೀಡಿದ ನೋಟೀಸು ಪ್ರಕಾರವಾಗಿ 2 ನೇ ಆರೋಪಿಯು 1 ನೇ ಆರೋಪಿ ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಚಾಸಾ 1 ರವರು 1 ನೇ ಆರೋಪಿಯು ಚಾಲಕ ಎಂದು ಹೇಳಿದ್ದಾರೆ ಎಂದು ಹೇಳಿದ್ದು, ಅವರ ಬಳಿ ನಾವು ದಾಖಲೆಗಳನ್ನು ಪಡೆದಿರುವುದಿಲ್ಲ. ಸಾಮಾನ್ಯವಾಗಿ ಚಾಲಕರ ಬಗ್ಗೆ ಯಾವುದೇ ದಾಖಲೆಗಳನ್ನು ಇಟ್ಟುಕೊಂಡಿರುವುದಿಲ್ಲ. ಅಲ್ಲದೇ ಚಾಸಾ 1 ರವರು ದೂರಿನಲ್ಲಿ ಹಾಗೆ ತಿಳಿಸಿರುವ ಕಾರಣ ಅದರ ಬಗ್ಗೆ ದಾಖಲೆ ಪಡೆಯುವ ಅವಶ್ಯಕತೆ ಇರುವುದಿಲ್ಲ.

ಚಾಸಾ 1 ರವರು ಬೈಂದೂರು ನಿವಾಸಿಗಳು ಎಂದರೆ ಸರಿ. ಸದರಿ ದೂರಿನ ಪ್ರಕಾರ ಅವರು ತಕ್ಸೀರು ಸ್ಥಳವನ್ನು ಸ್ವತಃ ನೋಡಿರುವುದಿಲ್ಲ ಎಂದರೆ ಸರಿ. 1 ನೇ ಆರೋಪಿ ನಮ್ಮ ಠಾಣೆಗೆ ಸ್ವತಃ ಬಂದು ತಪ್ಪು ಒಪ್ಪಿಕೊಂಡಿದ್ದಾರೆ ಎಂದು ಹೇಳಿದ್ದು, ಅದರ ಬಗ್ಗೆ ಅವರ ಹೇಳಿಕೆ ಪಡೆದಿರುವುದಿಲ್ಲ. ಅವರ ಡಿಎಲ್ ಹಾಜರುಪಡಿಸಬೇಕು ಎಂದು ನೋಟೀಸು ನೀಡಿರುವುದಿಲ್ಲ. ಆದರೆ ಆರ್.ಸಿ. ಮಾಲೀಕರಿಗೆ ನೀಡಿದ್ದೇವೆ. 1 ನೇ ಆರೋಪಿಯ ಬಳಿ ಡಿಎಲ್ ಇರಲಿಲ್ಲ. 1 ನೇ ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಯಾವಾಗಲೂ

ಕಾಂಕ್ರಿಟ್ ಮಿಕ್ಸರ್ ವಾಹನವನ್ನು ಚಲಾಯಿಸಿರುವುದಿಲ್ಲ ಎಂದರೆ ಸರಿಯಲ್ಲ. ತಪ್ಪು ಮಾಹಿತಿ ಪ್ರಕಾರ ನಿರಪರಾಧಿ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಸದರಿ ವಾಹನದ ಚಾಲಕ ಎಂದು ಯಾರೂ ಮಾಹಿತಿ ನೀಡದೇ ಇದ್ದರೂ ಸಹಾ ನಾವು ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀ ಹೆಚ್.ಆರ್ .ಕೆ., 2 ನೇ ಆರೋಪಿ ಪರ ವಕೀಲರಿಂದಃ

ಕಾಂಕ್ರಿಟ್ ಮಿಕ್ಸರ್ ವಾಹನದ ಆರ್.ಸಿ. ಪಡೆದುಕೊಂಡಿದ್ದೇನೆ. ಅದು ದುರ್ಗಾ ಕಂಸ್ಟ್ರಕ್ಷನ್ ರವರ ಹೆಸರಿನಲ್ಲಿದೆ. ಸದರಿ ಕಂಸ್ಟ್ರಕ್ಷನ್ ಯಾರ ಮಾಲೀಕತ್ವದಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ಅದರ ಮಾಲೀಕರು 2 ನೇ ಆರೋಪಿಯಾಗಿರುತ್ತಾರೆ. 1 ನೇ ಆರೋಪಿಯು ದುರ್ಗಾ ಕಂಸ್ಟ್ರಕ್ಷನ್ ನಲ್ಲಿ ಯಾವಾಗಲೂ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 2 ನೇ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಐ.ಎಮ್.ವಿ. ಕಾಯ್ದೆಯ ಕಲಂ 115 ರ ಪ್ರಕಾರವಾಗಿ ನಾನು ಯಾವುದೇ ಕ್ರಮಗಳನ್ನು ಸರಿಯಾಗಿ ಪಾಲಿಸಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.